# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-6400/2014/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 27/9/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ಪಿ.ಎನ್.ಲೋಕೇಶ್, ಉಪ ವಿಭಾಗಾಧಿಕಾರಿ, ಹರಪನಹಳ್ಳಿ ಉಪ ವಿಭಾಗ, (2) ಶ್ರೀ.ಎಂ.ಆರ್.ನಾಗರಾಜ್, ತಹಶೀಲ್ದಾರ್, ಹರಪನಹಳ್ಳಿ ತಾಲ್ಲೂಕು, (3) ಶ್ರೀ.ಬಸವರಾಜ ಐ, ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ, (4) ಶ್ರೀ.ಚಂದ್ರಶೇಖರ್ ಎಸ್, ರಾಜಸ್ವ ನಿರೀಕ್ಷಕರು, ತಾಲ್ಲೂಕು ಕಚೇರಿ, ಹರಪನಹಳ್ಳಿ, (5) ಶ್ರೀ.ಎ.ಎಲ್.ವಿವೇಕಾನಂದ, ಗ್ರಾಮ ಲೆಕ್ಕಾಧಿಕಾರಿ, ಹರಪನಹಳ್ಳಿ, ಮತ್ತು (6) ಶ್ರೀ.ಸಂತೋಷ್ ಕುಮಾರ್ ಜೆ.ಕೆ, ಕರ ವಸೂಲಿಗಾರ, ಪುರಸಭೆ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ, - ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಕರ್ತವ್ಯಲೋಪ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀಮತಿ.ವೀರಮ್ಮ ಕೋಂ ವಿಭೂತಿ ಕರಿಬಸಯ್ಯ, 8ನೇ ವಾರ್ಡ್ ಕೌಟೇರ ಓಣಿ, ಸದ್ಯವಾಸ 183ನೇ ಮನೆ, ಹರಿಹರ ರಸ್ತೆ, ಆಸರೆ ಕಾಲೋನಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ (1) ಶ್ರೀ.ಪಿ.ಎನ್.ಲೋಕೇಶ್, ಉಪ ವಿಭಾಗಾಧಿಕಾರಿ, ಹರಪನಹಳ್ಳಿ ಉಪ ವಿಭಾಗ, (2) ಶ್ರೀ.ಎಂ.ಆರ್.ನಾಗರಾಜ್, ತಹಶೀಲ್ದಾರ್, ಹರಪನಹಳ್ಳಿ ತಾಲ್ಲೂಕು, (3) ಶ್ರೀ.ಬಸವರಾಜ ಐ, ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ, (4) ಶ್ರೀ.ಚಂದ್ರಶೇಖರ್ ಎಸ್, ರಾಜಸ್ವ ನಿರೀಕ್ಷಕರು, ತಾಲ್ಲೂಕು ಕಚೇರಿ, ಹರಪನಹಳ್ಳಿ, (5) ಶ್ರೀ.ಎ.ಎಲ್.ವಿವೇಕಾನಂದ, ಗ್ರಾಮ ಲೆಕ್ಕಾಧಿಕಾರಿ, ಹರಪನಹಳ್ಳಿ, ಮತ್ತು (6) ಶ್ರೀ.ಸಂತೋಷ್ ಕುಮಾರ್ ಜೆ.ಕೆ, ಕರ ವಸೂಲಿಗಾರ, ಪುರಸಭೆ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ದಿ.20/6/12 ರಂದು ಮನೆ ನಂ.183 ರ ಆಸರೆ ಮನೆ ಹಕ್ಕುಪತ್ರವನ್ನು ಇವರಿಗೆ ನೀಡಿದ್ದು, ಸದರಿ ಮನೆಯಲ್ಲಿ ಇವರು ವಾಸವಾಗಿರುತ್ತಾರೆ. ಆದರೆ, ಎದುರುದಾರರು ಇವರಿಗೆ ಮಂಜೂರಾದ ಮನೆಯನ್ನು ಮತ್ತೋರ್ವ ಫಲಾನುಭವಿಗೆ 2ನೇ ಆಯ್ಕೆ ಪಟ್ಟಿ ಮಾಡಿ ಹೊಸದಾಗಿ ದಾಖಲೆ ಸೃಷ್ಟಿ ಮಾಡಿ ಒಂದೇ ಹಕ್ಕುಪತ್ರವನ್ನು ಇಬ್ಬರಿಗೆ ನೀಡಿರುತ್ತಾರೆ. ಈ ಬಗ್ಗೆ ಸೂಕ್ತ ನ್ಯಾಯ ಒದಗಿಸಬೇಕೆಂದು ಕೇಳಿಕೊಂಡಿರುತ್ತಾರೆ.

Sd/-

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1, 2, 4 ಮತ್ತು 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಡಿಸೆಂಬರ್ 2012 ರಲ್ಲಿ ಪುನರ್ವಸತಿ ಕಲ್ಪಿಸಲು ಹಂಚಿಕೆ ಮಾಡಿದ ಆಸರೆ ಮನೆಗಳ ಪೈಕಿ ಮನೆ ಸಂ.183 ನ್ನು ಶ್ರೀಮತಿ.ನೀಲಮ್ಮ ಇವರಿಗೆ ಮಂಜೂರು ಮಾಡಿ ಹಕ್ಕುಪತ್ರವನ್ನು ವಿತರಿಸಲಾಗಿತ್ತು. ಹಂಚಿಕೆಯಾದ ಆಸರೆ ಮನೆಗಳ ಫಲಾನುಭವಿಗಳ ಪಟ್ಟಿಯ ಬಗ್ಗೆ ಸಾರ್ವಜನಿಕ ದೂರುಗಳು ಬಂದ ಹಿನ್ನೆಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಹಾಗೂ ಉಪ ವಿಭಾಗಾಧಿಕಾರಿಗಳು, ಹರಪನಹಳ್ಳಿ ಇವರ ನೇತೃತ್ವದಲ್ಲಿ ತಹಶೀಲ್ದಾರ್, ಹರಪನಹಳ್ಳಿ, ಮುಖ್ಯಾಧಿಕಾರಿಗಳು, ಪುರಸಭೆ, ಹರಪನಹಳ್ಳಿ ಇವರುಗಳನ್ನೊಳಗೊಂಡ ತಂಡವನ್ನು ರಚಿಸಿ ತನಿಖೆ ಮಾಡಿಸಿದ್ದು, ತನಿಖೆ ಮಾಡಿದ ತಂಡವು ದಿ.20/12/12 ರಂದು ಹಕ್ಕು ಪತ್ರ ಪಡೆದಿದ್ದ 508 ಫಲಾನುಭವಿಗಳಲ್ಲಿ 65 ಫಲಾನುಭವಿಗಳನ್ನು ಅನರ್ಹರೆಂದು ಗುರ್ತಿಸಿ ಪಟ್ಟಿಯಿಂದ ಕೈಬಿಟ್ಟು ಹೊಸದಾಗಿ 69 ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರಿಂದ ಪಟ್ಟಿಯನ್ನು ಅನುಮೋದಿಸಿಕೊಂಡು ಹಕ್ಕುಪತ್ರವನ್ನು ವಿತರಿಸಿರುತ್ತಾರೆ. ಆ ಸಮಯದಲ್ಲಿ ದೂರುದಾರರು .ವಾಸವಿದ್ದ ಹರಪನಹಳ್ಳಿ ಪುರಸಭೆ ಖಾತೆ ಸಂ.57/8ನೇ ಮನೆಯನ್ನು ದೂರುದಾರರ ಸ್ವಂತ ಮನೆಯೆಂದು ತಿಳಿದು ಅವರನ್ನು ಅನರ್ಹರ ಪಟ್ಟಿಗೆ ಸೇರಿಸಿ ಅವರಿಗೆ ಹಂಚಿಕೆ ಮಾಡಲಾದ 183ನೇ ಸಂಖ್ಯೆಯ ಮನೆಯನ್ನು ಶ್ರೀಮತಿ.ವಿಶಾಲಾಕ್ಷಿ ಕೋಂ ಶಂಕರ್ ಇವರಿಗೆ ಹಂಚಿಕೆ ಮಾಡಿದ್ದು ಇರುತ್ತದೆ. ಆ ಕುರಿತು ತಹಶೀಲ್ದಾರ್, ಹರಪನಹಳ್ಳಿ, ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿ ಜಂಟಿಯಾಗಿ ಅನರ್ಹರ ಪಟ್ಟಿಯನ್ನು ಪುನರ್‌ಪರಿಶೀಲನೆ ಮಾಡಿದ್ದು, ಶ್ರೀಮತಿ.ವಿಶಾಲಾಕ್ಷಿ ಕೋಂ ಶಂಕರ್ ಇವರ ಹೆಸರಿನಲ್ಲಿ ನಿವೇಶನ ಹಾಗೂ ಆರ್.ಸಿ.ಸಿ. ಮನೆ ಮತ್ತು ಬಂಗಾರದ ಅಂಗಡಿ ಇರುವುದನ್ನು ಪತ್ತೆ ಹಚ್ಚಿದ್ದು, ವಾಸ್ತವಾಗಿ ಶ್ರೀಮತಿ.ವಿಶಾಲಾಕ್ಷಿ ಇವರು ಆಸರೆ ಮನೆಯನ್ನು ಪಡೆಯಲು ಅನರ್ಹರೆಂದು ಮನವರಿಕೆ ಮಾಡಿಕೊಂಡಿರುತ್ತಾರೆ. ಶ್ರೀಮತಿ.ವೀರಮ್ಮ ಇವರ ಹೆಸರಿನಲ್ಲಿ ಯಾವುದೇ ಮನೆಯಾಗಲೀ ಅಥವಾ ನಿವೇಶನವಾಗಲೀ ಇರುವುದಿಲ್ಲ ಎನ್ನುವುದನ್ನು ಮನಗಂಡಿರುತ್ತಾರೆ. ಆದ್ದರಿಂದ. ವಿಶಾಲಾಕ್ಷಿಯವರಿಗೆ ನೀಡಿರುವ ಹಕ್ಕುಪತ್ರವನ್ನು ರದ್ದುಪಡಿಸಿ ವೀರಮ್ಮರವರ ಹೆಸರಿಗೆ ಹಕ್ಕುಪತ್ರವನ್ನು ಸ್ಥಿರೀಕರಿಸಲು ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಹೇಳಿರುತ್ತಾರೆ.

4) 3ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮಾನ್ಯ ತಹಶೀಲ್ದಾರ್, ಹರಪನಹಳ್ಳಿ ಯವರು ಆಸರೆ ಮನೆಗಳ ಪಟ್ಟಿಯನ್ನು ಪರಿಶೀಲನೆಗೆ ಅವರ ಕಚೇರಿಗೆ ಸಲ್ಲಿಸಿರುವಂತೆ ಪರಿಶೀಲಿಸಿ ಸದರಿ ಪಟ್ಟಿಯನ್ನು ಪುನಃ ತಹಶೀಲ್ದಾರ್ ಕಾರ್ಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಹರಪನಹಳ್ಳಿ ಉಪವಿಭಾಗಾಧಿಕಾರಿಗಳನ್ನು ಹಾಗೂ ತಹಶೀಲ್ದಾರ್‌ರವರನ್ನು ಫಲಾನುಭವಿಗಳ ಪಟ್ಟಿಯ ಪರಿಶೀಲನೆಯ ವಿಚಾರಣಾಧಿಕಾರಿಗಳನ್ನಾಗಿ ನಿಯೋಜಿಸಿದಂತೆ ಸದರಿ ಪಟ್ಟಿಯ ನ್ಯೂನತೆಗಳನ್ನು ಸರಿಪಡಿಸಿ ಅಂತಿಮಗೊಳಿಸಿರುತ್ತಾರೆಂದು ತಿಳಿಸಿರುತ್ತಾರೆ.

5) 6ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ 2009 ರಲ್ಲಿ ನೆರೆಹಾವಳಿಯಿಂದ ಹಾನಿಗೊಳಗಾಗಿ ಸಂತ್ರಸ್ಥರಿಗೆ ಶಾಶ್ವತ ನೆಲೆಯನ್ನು ಕಲ್ಪಿಸುವ ಸಂಬಂಧ ಪಟ್ಟಣದ ಹರಿಹರ ರಸ್ತೆಯಲ್ಲಿ ಆಸರೆ ಯೋಜನೆಯಡಿ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಕಾರ್ಯಕ್ರಮವನ್ನು ತಾಲ್ಲೂಕು ಆಡಳಿತ ಇಲಾಖೆಯಿಂದ ಮಾಡಲಾಗಿರುತ್ತದೆ. ಆದರೆ ಸದರಿ ಆಯ್ಕೆ ಪಟ್ಟಿಯಲ್ಲಿ ಕೆಲವೊಂದು ನ್ಯೂನತೆಗಳು ಕಂಡುಬಂದಿರುವುದರಿಂದ, ಆಯ್ಕೆಯಾದ ಫಲಾನುಭವಿಗಳ ಕುರಿತು ಸ್ಥಳ ಪರಿಶೀಲಿಸಿ ಸದರಿ ಪಟ್ಟಿಯನ್ನು ಮಾನ್ಯ ತಹಶೀಲ್ದಾರ್‌ರವರ ಕಾರ್ಯಾಲಯಕ್ಕೆ ಸಲ್ಲಿಸಲಾಗಿರುತ್ತದೆಯೆಂದು ತಿಳಿಸಿರುತ್ತಾರೆ.

6) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ತಹಶೀಲ್ದಾರ್, ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಕಂದಾಯ ನಿರೀಕ್ಷಕರು ದೂರುದಾರರಿಗೆ ಮಂಜೂರಾದ ಮನೆಯ ಹಕ್ಕುಪತ್ರವನ್ನು ಇಬ್ಬರಿಗೆ ನೀಡಿರುವುದರಿಂದ ಹರಪನಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಇರುತ್ತಾರೆ. ದೂರಿಗೆ ಸಂಬಂಧಿಸಿದಂತೆ ಸೂಕ್ತ ನ್ಯಾಯ ಒದಗಿಸಬೇಕೆಂದು ಕೋರಿಕೊಂಡಿರುತ್ತಾರೆ.

7) 1ನೇ ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಹಂಚಿಕೆ ಮಾಡಲಾದ 508 ಫಲಾನುಭವಿಗಳ ಪೈಕಿ 65 ಜನ ಫಲಾನುಭವಿಗಳು ಅನರ್ಹರೆಂದು ಕಂಡುಬಂದಿದೆ ಎಂದು ತಿಳಿಸಿರುವುದು ಕಂಡುಬರುತ್ತದೆ. ನಂತರದಲ್ಲಿ ಜಿಲ್ಲಾಧಿಕಾರಿಗಳ ಆದೇಶದಂತೆ ಪುನರ್ ಪರಿಶೀಲಿಸಿ ತಯಾರಿಸಿರುವ ಪಟ್ಟಿಯಲ್ಲಿ ಕೂಡ ನ್ಯೂನತೆಯಿಂದಾಗಿ ದೂರುದಾರರಿಗೆ ಮಂಜೂರಾದ ಮನೆಯನ್ನು ಇನ್ನೊಬ್ಬರಿಗೆ ಮಂಜೂರು ಮಾಡಿರುವುದು ಕಂಡುಬರುತ್ತದೆ. ಅದನ್ನು ಪರಿಶೀಲಿಸಿದಾಗ, ಫಲಾನುಭವಿಗಳ ಪಟ್ಟಿಯನ್ನು ತಯಾರಿಸುವಲ್ಲಿ ನ್ಯೂನತೆಗಳಾಗಿವೆ ಎನ್ನುವುದು ಮತ್ತು ಅನರ್ಹರನ್ನು ಕೂಡ ಪಟ್ಟಿಗೆ ಸೇರಿಸಿ ಮನೆಯನ್ನು ಮಂಜೂರು ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ದೂರುದಾರರು ತನ್ನ ದೂರಿನ ಜೊತೆ ಹಾಜರು ಪಡಿಸಿರುವ ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿದಾಗ, ಸದರಿ ಪಟ್ಟಿಗೆ ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ, ತಹಶೀಲ್ದಾರ್, ಹರಪನಹಳ್ಳಿ ಮತ್ತು ಉಪ ವಿಭಾಗಾಧಿಕಾರಿಗಳು, ಹರಪನಹಳ್ಳಿ ಉಪ ವಿಭಾಗ ಇವರು ಸಹಿಯನ್ನು ಮಾಡಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿರುವುದು ಕಂಡುಬರುತ್ತದೆ. ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಫಲಾನುಭವಿಗಳ ಬಗ್ಗೆ ಸೂಕ್ತವಾದ ವಿವರಗಳನ್ನು ಪಡೆದುಕೊಳ್ಳದೆ ಮತ್ತು ಸೂಕ್ತವಾದ ರೀತಿಯಲ್ಲಿ ಪರಿಶೀಲನೆ ನಡೆಸದೆ ಅನರ್ಹ ವ್ಯಕ್ತಿಗಳನ್ನು ಕೂಡ ಫಲಾನುಭವಿಗಳ ಪಟ್ಟಿಗೆ ಸೇರಿಸಿರುವುದು ಕಂಡುಬರುತ್ತದೆ. ಸದರಿ ಅಂಶಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ. ಆದ್ದರಿಂದ, ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

8) ಆದುದರಿಂದ, ಎದುರುದಾರರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಅಲ್ಲಗಳೆಯಲು

ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

9) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, 1 ರಿಂದ 6ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಅದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, 1 ರಿಂದ 4ನೇ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

27/9/16.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**